# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 | ENGLISH DAILY | Subscription Yearly - Rs. - | WEDNESDAY | 21-6-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ರಫ್ತು ಇಳಿಕೆಯಿಂದ ಸತತ 5 ದಿನ ಹೆಚ್ಚಳವಿದ್ದ ಪಾಮೆಣ್ಣೆ ದರ ಇಳಿಕೆ

ಸತತ 5 ದಿನಗಳಿಂದ ಹೆಚ್ಚಳವಿದ್ದ ಮಲೇಶಿಯನ್ ಪಾಮೆಣ್ಣೆ ದರ ರಫ್ತು ಇಳಿಕೆಯಿಂದ ಸ್ವಲ್ಪ ಮಟ್ಟಿನ ಇಳಿಕೆಯಾಗಿದೆ. ಟನ್‌ಗೆ 30 ರಿಂಗಿಟ್ಸ್ (0.8% ಇಳಿಕೆ) 3727 ರಿಂಗಿಟ್ಸ್ ($ 83.58) ಆಗಿದೆ. ಜೂನ್ 1–20 ರ ಅವಧಿಯ ಮಲೇಶಿಯನ್ ಪಾಮೆಣ್ಣೆ ರಫ್ತು 13 ರಿಂದ 16.8% ಇಳಿಕೆಯಾಗಿದೆಯೆನ್ನಲಾಗಿದೆ. ಜೂನ್ 1–15 ರ ವರೆಗಿನ ಉತ್ಪಾದನೆ 4.6% ಇಳಿಕೆಯಾಗಬಹುದೆನ್ನಲಾಗಿದೆ. ಜುಲೈ ತಿಂಗಳಿಗೆ ಕಚ್ಚಾ ಪಾಮೆಣ್ಣೆಯ ರಫ್ತು ಕರ 8 ಶೇಕಡಾ ಕ್ಕೆ ಮಲೇಶಿಯ ನಿಗದಿಗೊಳಿಸಿದೆಯೆನ್ನಲಾಗಿದೆ.

## ಭಾರತದ ಅಕ್ಕಿ ಖರೀದಿ 55.8 ಮಿಲಿಯನ್ ಟನ್ ಹಾಗೂ ಗೋಧಿ 26.2 ಮಿಲಿಯನ್ ಟನ್

2022–23 ನೇ ಸಾಲಿನಲ್ಲಿ ಇದುವರೆಗೆ ಭಾರತದ ಅಕ್ಕಿ ಖರೀದಿ 55.8 ಮಿಲಿಯನ್ ಟನ್ ಹಾಗೂ ಗೋಧಿ 26.2 ಮಿಲಿಯನ್ ಟನ್ ತಲುಪಿದೆಯೆನ್ನಲಾಗಿದೆ. ಇದರಿಂದ ಸರಕಾರ ಸಾಕಷ್ಟು ಅಕ್ಕಿ ಹಾಗೂ ಗೋಧಿ ದಾಸ್ತಾನು ಹೊಂದಿದಂತಾಗಿದೆಯೆನ್ನಲಾಗಿದೆ.

## ಪ್ರಮುಖ ಮಾರುಕಟ್ಟೆಗಳಲ್ಲಿ ಸಕ್ಕರೆ ದರ ಹೆಚ್ಚಳ

ಪ್ರಬಲ ಬೇಡಿಕೆಯಿಂದ ಪ್ರಮುಖ ಮಾರುಕಟ್ಟೆಗಳಲ್ಲಿ ಸಕ್ಕರೆ ದರ ಕ್ವಿಂಟಾಲ್‌ಗೆ ರೂ. 10 ರಿಂದ 40 ರ ತನಕ ಹೆಚ್ಚಳವಾಗಿದೆಯೆನ್ನಲಾಗಿದೆ. ಪ್ರಮುಖ ಬೆಳೆಯುವ ಪ್ರದೇಶಗಳಲ್ಲಿ ಮಳೆ ಸಾಮಾನ್ಯಕ್ಕಿಂತ ಕಡಿಮೆಯಾಗುವ ನಿರೀಕ್ಷೆಯೂ ದರ ಹೆಚ್ಚಳಕ್ಕೆ ಪೂರಕವಾಗಿದೆ.

## 2022–23 ಸೀಸನ್ ನಲ್ಲಿ 83 ಮಿಲಿಯನ್ ಟನ್ ಭತ್ತ ಖರೀದಿ

ಕನಿಷ್ಠ ಬೆಂಬಲ ಬೆಲೆಯನ್ವಯ 2022–23 ನೇ ಸಾಲಿನಲ್ಲಿ ಸರಕಾರ ರೈತರಿಂದ 83 ಮಿಲಿಯನ್ ಟನ್ ಭತ್ತ ಖರೀದಿಸಿದೆಯೆನ್ನಲಾಗಿದೆ.